Prajavani
4/2/15

Chess: Second Place for RVCE



ಬಿಎಫ್‌ಸಿ ತಂಡದ ರಾಬಿನ್ ಸಿಂಗ್ (ಬಲ) ಮತ್ತು ಎನ್.ಎಸ್. ಮಂಜು ಮಂಗಳವಾರ ಅಭ್ಯಾಸ ನಡೆಸಿದರು

## ಫುಟ್‌ಬಾಲ್: ಬಿಎಫ್‌ಸಿಗೆ ಅಗ್ನಿ ಪರೀಕ್ಷೆ

ಜೋಹರ್ ಬರು (ಪಿಟಿಐ): ಈ ಬಾರಿಯ ಐ ಲೀಗ್ ಟೂರ್ನಿಯಲ್ಲಿ ನೀರಸ ಪ್ರದರ್ಶನ ತೋರಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡಕ್ಕೆ ಈಗ ಅಗ್ನಿ ಪರೀಕ್ಷೆ ಎದುರಾಗಿದೆ.

ಬುಧವಾರ ನಡೆಯುವ ಎಎಫ್‌ಸಿ ಚಾಂಪಿಯನ್ಸ್ ಲೀಗ್ ಟೂರ್ನಿಯ ಮೊದಲ ಸುತ್ತಿನ 'ಪ್ಲೇ ಆಫ್' ಪಂದ್ಯದಲ್ಲಿ ಸುನಿಲ್ ಚೆಟ್ರಿ ಬಳಗ ಮಲೇಷ್ಯಾದ ಬಲಿಷ್ಠ ತಂಡ ಜೋಹರ್ ದಾರುಲ್ ತಾಜಿಮ್ ಸವಾಲು ಎದುರಿಸಲಿದೆ.

ಹೋದ ವರ್ಷ ಐ ಲೀಗ್‌ನಲ್ಲಿ ಪ್ರಶಸ್ತಿ ಗೆದ್ದಿದ್ದ ಬಿಎಫ್‌ಸಿ ಈ ಬಾರಿಯ ಟೂರ್ನಿಯ ಆರಂಭಿಕ ಪಂದ್ಯದಲ್ಲಿ ಡೆಂಪೊ ಎಸ್‌ಸಿ ಎದುರು ಗೋಲು ರಹಿತ ಡ್ರಾ ಸಾಧಿಸಿತ್ತು. ಬಳಿಕ ನಡೆದ ಪಂದ್ಯಗಳಲ್ಲಿ 1–0 ಗೋಲಿನಿಂದ ಈಸ್ಟ್ ಬೆಂಗಾಲ್ ಎದುರೂ ಹಾಗೂ 3–1 ಗೋಲುಗಳಿಂದ ಪುಣೆ ಎಫ್‌ಸಿ ವಿರುದ್ಧವೂ ಸೋಲು ಕಂಡಿತ್ತು.

ಹೀಗಾಗಿ ಸುನಿಲ್ ಚೆಟ್ರಿ ಪಡೆ ಈ ಪಂದ್ಯದಲ್ಲಿ ಹೊಸ ಹುಮ್ಮಸ್ಸಿನೊಂದಿಗೆ ಕಣಕ್ಕಿಳಿದು ಗೆಲುವು ಪಡೆಯುವುದು ಅನಿವಾರ್ಯವಾಗಿದೆ.

## ಚೆಸ್: ಆರ್.ವಿ ಕಾಲೇಜಿಗೆ 2ನೇ ಸ್ಥಾನ

ಬೆಂಗಳೂರು: ನಗರದ ಆರ್.ವಿ. ಎಂಜಿನಿಯರಿಂಗ್ ಕಾಲೇಜು ತಂಡ ಮಲಾಯ ವಿಶ್ವವಿದ್ಯಾಲಯ ಮತ್ತು ಮಲೇಷ್ಯಾ ಚೆಸ್ ಫೆಡರೇಷನ್ ಸಹಯೋಗದಲ್ಲಿ ಮಲೇಷ್ಯಾದಲ್ಲಿ ನಡೆದ 19ನೇ ಜಿಎಸಿಸಿ ಅಂತರ ರಾಷ್ಟ್ರೀಯ ಅಂತರ ವಿಶ್ವವಿದ್ಯಾಲಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಇದೇ ಮೊದಲ ಬಾರಿಗೆ 'ರನ್ನರ್ಸ್ ಅಪ್' ಸಾಧನೆ ತೋರಿದೆ.

ಲಾತ್ವಿಯ, ಜರ್ಮನಿ, ಫ್ರಾನ್ಸ್, ಸಿಂಗಪುರ, ಶ್ರೀಲಂಕಾ ಮತ್ತು ಭಾರತ ಸೇರಿದಂತೆ 20 ವಿ.ವಿ.ಗಳ 112 ಸ್ಪರ್ಧಿಗಳು ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿದ್ದರು. ಆರ್.ವಿ. ಕಾಲೇಜಿನ ಎಂ.ಜಿ.ಗಹನ್, ಆಂಥೋಣಿಯೊ ವಿಯಾನಿ ಡಿ ಕುನ್ಹಾ, ಡಿ.ಯಶಸ್, ಆರ್.ನಾಗೇಶ್ ಮತ್ತು ವನೆಸ್ಸಾ ಡಿಸೋಜಾ ಅವರಿದ್ದ ತಂಡ ಈ ಸಾಧನೆ ಮಾಡಿದೆ.

ಪುರುಷರ ಓಪನ್ ವಿಭಾಗದಲ್ಲಿ ಗಹನ್ 7 ಪಾಯಿಂಟ್ಸ್ ಕಲೆಹಾಕಿ ಎರಡನೇ ಸ್ಥಾನ ಪಡೆದರೆ, ಬಾಲಕಿಯರ ವಿಭಾಗದಲ್ಲಿ ವನೆಸ್ಸಾ ಡಿಸೋಜಾ 5.5 ಪಾಯಿಂಟ್ಸ್ ಸಂಗ್ರಹಿಸಿ ನಾಲ್ಕನೇಯವರಾಗಿ ಸ್ಪರ್ಧೆ ಕೊನೆಗೊಳಿಸಿದರು. ಅಂಥೋಣಿಯೊ (6.5), ಯಶಸ್ (6.5) ಮತ್ತು ನಾಗೇಶ್ (6) ಕೂಡಾ ಉತ್ತಮ ಪ್ರದರ್ಶನ ತೋರಿದ ಕಾರಣ ಆರ್.ವಿ. ಕಾಲೇಜು ಒಟ್ಟಾರೆ 25.5 ಪಾಯಿಂಟ್ಸ್ ಕಲೆಹಾಕಿ 'ರನ್ನರ್ಸ್ ಅಪ್' ಆಯಿತು. ಸಿಂಗಪುರದ ಎನ್.ಟಿ.ಯು ವಿ.ವಿ. ಒಟ್ಟು 26.5 ಪಾಯಿಂಟ್ಸ್ ಗಳಿಸಿ ಚಾಂಪಿಯನ್ ಎನಿಸಿತು.